**SC No. 34/2018**
**PW-28**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 34/2018**

| ಸಾಕ್ಷಿದಾರರ ಹೆಸರು | ಜಿ.ಸಿ ರಾಜು | ಪ್ರಮಾಣ ವಚನ ಮಾಡಿದ ದಿನಾಂಕ: 14.01.2026 |
|---|---|---|
| ತಂದೆಯ/ಗಂಡನ ಹೆಸರು | ಚಿಕ್ಕಹನುಮೇಗೌಡ | |
| ವಯಸ್ಸು | 48 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್‌ಪೆಕ್ಟರ್, ಸಿಸಿಬಿ ಬೆಂಗಳೂರು ನಗರ | ಪ್ರಾ.ಸಾಃ 28 |
| ವಾಸ ಸ್ಥಳ | ಬೆಂಗಳೂರು | ಚಾ.ಸಾಃ 45 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೈಸೂರು ಸಿಸಿಬಿ ಘಟಕದಲ್ಲಿ ಆಗಸ್ಟ್ *2015* ರಿಂದ ನವೆಂಬರ್ *2017* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು. ಅದೇ ರೀತಿ ಜನವರಿ *2019* ರಿಂದ *2021* ಆಗಸ್ಟ್ ವರೆಗೆ ಕುವೆಂಪುನಗರ ಪೊಲೀಸ್ ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ಉದಯಗಿರಿ ಪೊಲೀಸ್ ಠಾಣೆಯ ಮೊ.ಸಂಖ್ಯೆ *59/2016* ಪ್ರಕರಣಕ್ಕೆ ಸಂಬಧಿಸಿದಂತೆ ಪರಾರಿಯಾಗಿರುವ ಅಬೀದ್ ಪಾಶಾ ಎಂಬುವನನ್ನು ಪತ್ತೆ ಮಾಡಿ ತಂದು ಹಾಜರುಪಡಿಸುವಂತೆ ಎಸಿಪಿ, ಸಿಸಿಬಿ ಘಟಕದವರು ಆದೇಶ ಮಾಡಿದ್ದು ಅದರಂತೆ ದಿನಾಂಕ *07.08.2016* ರಂದು ಸದರಿ ಆರೋಪಿ ರಾಜೀವ್ ನಗರದ ರಿಂಗ್ ರಸ್ತೆ ಬಳಿ ಇರುವ ವಾಟರ್ ಟ್ಯಾಂಕ್ ಬಳಿ ಇರುವುದಾಗಿ ಖಚಿತ ಮಾಹಿತಿ ಮೇರೆಗೆ ಸಿಬ್ಬಂದಿಯವರೊಂದಿಗೆ ಕೂಡಿ ರಾತ್ರಿ *11.45* ಗಂಟೆಗೆ

ವಶಕ್ಕೆ ಪಡೆದುಕೊಂಡು ದಿನಾಂಕ *08.08.2016* ರಂದು ಬೆಳಗ್ಗೆ *12.30* ಗಂಟೆಗೆ ಎಪಿಸಿ, ಸಿಸಿಬಿ ಘಟಕದವರ ಮುಂದೆ ಲಿಖಿತ ವರದಿಯೊಂದಿಗೆ ಹಾಜರುಪಡಿಸಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ.***45* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***45(ಎ)* ಎಂದು ಗುರುತಿಸಲಾಯಿತು. ಆ ದಿನ ನನ್ನೊಂದಿಗೆ ಸಿಬ್ಬಂದಿಯವರಾದ ಚಾಸಾ*-50, 54* ಮತ್ತು *55* ಇದ್ದರು. ನಾನು *1* ನೇ ಆರೋಪಿ ಅಬೀದ್ ಪಾಶಾ ರವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರು ಇರುವ *1* ನೇ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಅದೇ ರೀತಿ ದಿನಾಂಕ *15.08.2016* ರಂದು ಹುಣಸೂರು ಜೋಡಿ ಕೊಲೆ ಪ್ರಕರಣದಲ್ಲಿನ ಆರೋಪಿ ಮುಜಾಮಿಲ್ @ ಪೂಲ್ ಮುಜಾಮಿಲ್ ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಎಸಿಪಿ ಸಿಸಿಬಿ ಘಟಕದವರು ಆದೇಶಿಸಿದ್ದರಿಂದ ಪಿ.ಎಸ್.ಐ ರಮೇಶ್ *(ಚಾಸಾ-49),* ಚಾಸಾ*-51* ಉಮೇಶ್ ಹಾಗೂ ಮತ್ತೊಬ್ಬ ಸಿಬ್ಬಂದಿಯವರೊಂದಿಗೆ ಕೂಡಿ ಸದರಿ ಆರೋಪಿಯು ಮೈಸೂರು ನಗರದ ಗಾಯತ್ರಿ ಪುರಂ ಬಸ್ ನಿಲ್ದಾಣದ ಬಳಿ ಇರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ ಅದೇ ದಿನ ಸಂಜೆ *6.00* ಗಂಟೆಗೆ ವಶಕ್ಕೆ ಪಡೆದುಕೊಂಡು ಎಪಿಸಿ ಸಿಸಿಬಿ ಘಟಕದವರ ಮುಂದೆ ಸಂಜೆ *6.15* ಗಂಟೆಗೆ ಹಾಜರುಪಡಿಸಿ ವರದಿ ನೀಡಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***46* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.** *46 (ಎ)* ಎಂದು ಗುರುತಿಸಲಾಯಿತು. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ ಸದರಿ ಆರೋಪಿ ಮುಜಾಮಿಲ್ @ ಪೂಲ್ ಮುಜಾಮಿಲ್ ರವರನ್ನು ಕೈಬಿಟ್ಟಿರುತ್ತದೆ.

ದಿನಾಂಕ *17.08.2016* ರಂದು ಸಿಸಿಬಿ ಘಟಕದ ಎಸಿಪಿ ರವರ ಸೂಚನೆಯಂತೆ

ಪರಾರಿಯಾಗಿರುವ ಆರೋಪಿ ಮೊಹಮ್ಮದ್ ಅನೀಫ್ ರವರನ್ನು ತಂದು ಹಾಜರುಪಡಿಸುವಂತೆ ಸೂಚಿಸಿದ್ದರಿಂದ ಸಿಬ್ಬಂದಿಯವರ ಜೊತೆ ಕೂಡಿ ಆರೋಪಿತನ ಬಗ್ಗೆ ಮಾಹಿತಿ ಸಂಗ್ರಹಿಸಿ ಅದೇ ದಿನ ಆರೋಪಿತನು ಕಲ್ಯಾಣ ಗಿರಿಯ ಆರ್.ಟಿ.ಒ ಕಛೇರಿ ಬಳಿ ಇರುವ ಬಗ್ಗೆ ಮಾಹಿತಿ ಸಂಗ್ರಹಿಸಿ ರಾತ್ರಿ *8.30* ಗಂಟೆಗೆ ವಶಕ್ಕೆ ಪಡೆದುಕೊಂಡು ಅದೇ ದಿನ ರಾತ್ರಿ *9.00* ಗಂಟೆಗೆ ಎಸಿಪಿ ಸಿಸಿಬಿ ಘಟಕದವರ ಮುಂದೆ ಲಿಖಿತ ವರದಿಯೊಂದಿಗೆ ಹಾಜರುಪಡಿಸಿದ್ದೆನು. ನಾನು ಆ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*47* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*47(ಎ)* ಎಂದು ಗುರುತಿಸಲಾಯಿತು.

*3* ನೇ ಆರೋಪಿ ಆಯೂಬ್ ಖಾನ್ ವಿರುದ್ಧ ನಾನು ಸಿಸಿಬಿ ಘಟಕದಲ್ಲಿ ಇದ್ದಾಗ *2* ಪ್ರಕರಣಗಳನ್ನು ಪಿರ್ಯಾದಿಯಾಗಿ ಉದಯಗಿರಿ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದು ಒಂದು ಉದಯಗಿರಿ ಪೊಲೀಸ್ ಠಾಣೆಯ ಮೊ.ಸಂಖ್ಯೆ *157/2016* ಮತ್ತು *2* ನೇ ಪ್ರಕರಣ ಮೊ.ಸಂಖ್ಯೆ *165/2016* ಇದ್ದವು. ಆ ಪ್ರಕರಣಗಳಲ್ಲಿ ಆರೋಪಿತನು ಅಕ್ರಮವಾಗಿ ವಾಣಿಜ್ಯ ವಾಹನಗಳಿಗೆ ಗೃಹ ಬಳಕೆಯ ಸಿಲೆಂಡರ್ ಗಳನ್ನು ಬಳಸಿಕೊಂಡು ಗ್ಯಾಸ್ ಫಿಲಿಂಗ್ ಮಾಡುತ್ತಿದ್ದರಿಂದ ಸದರಿ ಪ್ರಕರಣಗಳಲ್ಲಿ ಪಿರ್ಯಾದನ್ನು ಉದಯಗಿರಿ ಪೊಲೀಸ್ ಠಾಣೆಗೆ ಸಲ್ಲಿಸಿದ್ದೆ. ಸಾಕ್ಷಿದಾರರು ಉದಯಗಿರಿ ಪೊಲೀಸ್ ಠಾಣೆಯ ಮೊ.ಸಂಖ್ಯೆ *157/2016* ಮತ್ತು ಮೊ.ಸಂಖ್ಯೆ *165/2016* ರ ಪ್ರ.ವ.ವರದಿ ಮತ್ತು ದೂರಿನ ದೃಡೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*48* ರಿಂದ *51* ಎಂದು ಗುರುತಿಸಲಾಯಿತು. ನಾನು ಆರೋಪಿ ಆಯೂಬ್ ಖಾನ್ @ ಆಯೂಬ್ ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ಆಯೂಬ್ ನನ್ನು ನೋಡಿ

ಗುರುತಿಸಿರುತ್ತಾರೆ.

ನಾನು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ, ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮಾನ್ಯ ಡಿಸಿಪಿ ಕಾನೂನು ಸುವ್ಯವಸ್ಥೆಯವರು ಉದಯಗಿರಿ ಪೊಲೀಸ್ ಠಾಣೆಯ ಮೊ.ಸಂಖ್ಯೆ *59/2016* ರ ಪ್ರಕರಣದಲ್ಲಿನ ಪರಾರಿಯಾಗಿರುವ ಅತೀಕ್ ಅಹಮದ್ ಷರೀಫ್ @ ಟಿಂಬರ್ ಅತೀಕ್ ರವರನ್ನು ಪತ್ತೆ ಮಾಡಿ ಎಸಿಪಿ ಸಿಸಿಬಿ ಘಟಕವರ ಮುಂದೆ ಹಾಜರುಪಡಿಸುವಂತೆ ಮೌಖಿಕ ಸೂಚನೆ ನೀಡಿದ್ದರ ಮೇರೆಗೆ ಸದರಿ ಆರೋಪಿ ಇರುವಿಕೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ದಿನಾಂಕ *23.04.2019* ರಂದು ಪರಾರಿಯಾಗಿರುವ ಆರೋಪಿ ಟಿಂಬರ್ ಅತೀಕ್ ಈತನು ಬೆಂಗಳೂರು ನಗರದ ಕೆ.ಜಿ. ಹಳ್ಳಿಯಲ್ಲಿ ಇರುವ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಿ ಸಿಬ್ಬಂದಿಯವರಾದ ನಿರಂಜನ್ ಮತ್ತು ರಾಜೇಂದ್ರ ರವರೊಂದಿಗೆ ಕೂಡಿ ಬೆಂಗಳೂರು ನಗರದ ಕೆ.ಜಿ ಹಳ್ಳಿಗೆ ಹೋಗಿ ದಿನಾಂಕ *24.04.2019* ರಂದು ಬೆಳಗ್ಗೆ *7.00* ಗಂಟೆಗೆ ವಶಕ್ಕೆ ಪಡೆದುಕೊಂಡು ಅದೇ ದಿನ ಬೆಳಗ್ಗೆ *11.00* ಗಂಟೆಗೆ ಎಸಿಪಿ ಸಿಸಿಬಿ ಘಟಕದವರ ಮುಂದೆ ಲಿಖಿತ ವರದಿ ನೀಡಿ ಹಾಜರುಪಡಿಸಿದ್ದೆನು. ಸಾಕ್ಷಿದಾರರು ದೃಡೀಕೃತ ವರದಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ನಿಪಿ-*52* ಎಂದು ಗುರುತಿಸಲಾಯಿತು. ನಾನು ಆರೋಪಿ ಅತೀಕ್ ಅಹಮದ್ ಷರೀಫ್ @ ಟಿಂಬರ್ ಅತೀಕ್ ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ಟಿಂಬರ್ ಅತೀಕ್ ನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 5 ಆರೋಪಿತರ ಪರ ವಕೀಲರಿಂದ :**

ಆರೋಪಿ 1, 3 ಮತ್ತು 5 ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸಿಸಿಬಿ ಘಟಕದ ಎಸಿಪಿ ಗೋಪಾಲ್ ರವರು ಮೌಖಿಕ ವಾಗಿ ಆದೇಶಿಸಿದ್ದರು. ಎಸಿಪಿ ರವರು

ಆರೋಪಿತರ ಪತ್ತೆಗಾಗಿ ಮೌಖಿಕವಾಗಿ ಆದೇಶಿಸಿದಾಗ 1 ನೇ ಆರೋಪಿತನ ರೌಡಿ ಶೀಟರ್ ನ ಪ್ರತಿಯನ್ನು ನೀಡಿದ್ದರು. ಅದರಲ್ಲಿ ಫೋಟೋ ಸಹ ಇತ್ತು. ಆರೋಪಿತರನ್ನು ವಶಕ್ಕೆ ಪಡೆದುಕೊಳ್ಳುವಾಗ ಆರೋಪಿತರು ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರಲಿಲ್ಲ ಏಕೆಂದರೆ ಅವರನ್ನು ನಾವು ಸುತ್ತುವರಿದು ಹಿಡಿದುಕೊಂದೆದ್ದೆವು. ನಾನು ಆರೋಪಿತರನ್ನು ವಶಕ್ಕೆ ತೆಗೆದುಕೊಳ್ಳುವಾಗ ಕಾನೂನು ಸೂಚನಾವಳಿಗಳನ್ನು ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ಕಡೆಯಿಂದ ಏನನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿ. ನಾನು ಯಾವುದೇ ಕಾನೂನು ಕ್ರಮ ಜರುಗಿಸದೇ ಬೇರೊಂದು ಪ್ರಕರಣದಲ್ಲಿ ಇದ್ದ ಆರೋಪಿತರನ್ನು ಈ ಪ್ರಕರಣದ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಆರೋಪಿತರಲ್ಲದವರನ್ನು ವಶಕ್ಕೆ ಪಡೆದುಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಸ್ಥಳ ಗಳಿಂದ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿಲ್ಲ ಮತ್ತು ಎಸಿಪಿ ರವರ ಮುಂದೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 9 ಮತ್ತು 10 ಆರೋಪಿತರ ಪರ ವಕೀಲರಿಂದ</u>** :

ಪ್ರಸ್ತುತ 2 ಪ್ರಕರಣಗಳು ಮೈಸೂರು ನಗರದ ಸಿಸಿಬಿ ಘಟಕದ ತನಿಖೆಯಲ್ಲಿ ಇದ್ದೆವು. ನಾನು ಆರೋಪಿತರನ್ನು ವಶಕ್ಕೆ ಪಡೆದುಕೊಂಡು ವರದಿಯನ್ನು ತನಿಖಾಧಿಯವರಿಗೆ ನೀಡಿರುತ್ತೇನೆ. ನಾನು ವರದಿಯನ್ನು ಕೊಟ್ಟಾಗ ತನಿಖಾಧಿಕಾರಿಯವರು

ಪಡೆದುಕೊಂಡಿರುತ್ತದೆ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಕೆಲವು ತನಿಖಾಧಿಕಾರಿಯವರು ಸ್ವೀಕರಿಸಿ ದಿನಾಂಕ, ತಿಂಗಳು ಮತ್ತು ವರ್ಷ ನಮೂದಿಸಿ ಸಹಿ ಮಾಡಿರುತ್ತಾರೆ ಕೆಲವರು ಸ್ವೀಕರಿಸಿ ಸಹಿ ಮಾಡುತ್ತಾರೆ. ನಾನು ಈ ಪ್ರಕರಣಗಳಲ್ಲಿ ವರದಿಯನ್ನು ಬೆರಳಚ್ಚು ಮಾಡಿಸಿ ಕೊಟ್ಟಿದ್ದೆ. ನಾನು ದಿನಾಂಕ 07.08.2016 ರಂದು 1 ನೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–45 ಅನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿ ಆಯೂಬ್ ಖಾನ್ ರವರ ಮೇಲೆ ಕೊಟ್ಟಂತಹ ದೂರಿನಲ್ಲಿ ಪಿರ್ಯಾದುದಾರರು ಇದ್ದು ಆ ಕೇಸಿನಲ್ಲಿ ಆತನು ಬಿಡುಗಡೆ ಆಗಿದ್ದರಿಂದ ಈ ದ್ವೇಷ ದಿಂದ ಹಿಡಿದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತನ ಮೇಲೆ ಹುಣಸೂರು ನ್ಯಾಯಾಲಯದಲ್ಲಿ ದಾಖಲಾಗಿದ್ದ ಕೇಸು ಉಚ್ಚ ನ್ಯಾಯಾಲಯದಲ್ಲಿ ವಜಾ ಆಗಿತ್ತು ಎನ್ನುವ ಬಗ್ಗೆ ನನಗೆ ಗೊತ್ತಿರಲಿಲ್ಲ. ನಾನು ಆರೋಪಿತನು ಆ ಕೇಸಿನಲ್ಲಿ ಬಿಡುಗಡೆ ಆಗಿದ್ದರೂ ಸಹ ವಶಕ್ಕೆ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. 9 ನೇ ಆರೋಪಿತನನ್ನು ಕೆ.ಜಿ. ಹಳ್ಳಿಯಲ್ಲಿ ಇರುವ ಜಾಯ್ ಫುಡ್ ನವರು ಕಾರ್ಮಿಕರಿಗೆ ನೀಡಿದ್ದ ರೂಂನಲ್ಲಿ ವಾಸ್ತವ್ಯ ಮಾಡಿದ್ದಾಗ ವಶಕ್ಕೆ ಪಡೆದುಕೊಂಡಿದ್ದೆ. ನನಗೆ 9 ನೇ ಆರೋಪಿತನನ್ನು ಕಾರ್ಮಿಕರಿಗೆ ನೀಡಿದ್ದ ರೂಂನಲ್ಲಿ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಸರ್ಚ್ ವಾರೆಂಟ್ ಇರಲಿಲ್ಲ ಆದರೆ ಕೊಲೆ ಪ್ರಕರಣದ ಪರಾರಿ ಆರೋಪಿತ ಆಗಿದ್ದರಿಂದ ಆತನನ್ನು ವಶಕ್ಕೆ ಪಡೆದುಕೊಂಡಿದ್ದೆನು. ಆರೋಪಿತನು ಜಾಯ್ ಫುಡ್ ಗೆ ಯಾವುದೇ ರೀತಿಯ ಸಂಬಂಧ

ಇರಲಿಲ್ಲ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರಲಿಲ್ಲ. ನಾನು ಹೇಳಿದಂತಹ ರೂಂನಲ್ಲಿ 9 ನೇ ಆರೋಪಿ ಇರಲಿಲ್ಲ ಆತನನ್ನು ಜಾಯ್ ಫುಡ್ ರೂಂನಿಂದ ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತನಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಎಸಿಪಿ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.**